# ಫುಸ್ಕೊಸ್ ಶಾಲೆ (ಐಸಿಎಸ್ಇ)
## ತ್ರೈಮಾಸಿಕ ಪರೀಕ್ಷೆ - 2018
## ವಿಷಯ: ಕನ್ನಡ ದ್ವಿತೀಯ ಭಾಷೆ

ತರಗತಿ: VIII ಅಂಕಗಳು: 80

---

### ವಿಭಾಗ –ಎ ( 40ಅಂಕಗಳು )

**I.** ಪ್ರಬಂಧ (ಬೇಕಾದ ಒಂದಕ್ಕೆ ಮಾತ್ರ) 15

೧. ವೇದ ಸುಳ್ಳಾದರು ಗಾದೆ ಸುಳ್ಳಲ್ಲ – ಈ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.

೨. ಗ್ರಾಮೋದ್ದಾರ ಇಂದಿನ ತುರ್ತು ಅಗತ್ಯವಾಗಿದೆ. ಆದ್ದರಿಂದ ಹಳ್ಳಿಗಳ ಅಭಿವೃದ್ಧಿಗೆ ನೀವು ಕೊಡುವ ಸಲಹೆಗಳನ್ನು ವಿವರಿಸುತ ಪ್ರಬಂಧ ಬರೆಯಿರಿ.

**II.** ಪತ್ರಲೇಖನ (ಬೇಕಾದ ಒಂದಕ್ಕೆ ಮಾತ್ರ) 7

೧. ನೀವು ಚಿತ್ರ ಕಲಾವಿದರು ನಿಮ್ಮ ಊರಿನಲ್ಲಿ ನಡೆಯುವ ಚಿತ್ರಕಲಾಸ್ಪರ್ಧೆಯಲ್ಲಿ ನೀವು ಬಿಡಿಸಿರುವ ಚಿತ್ರ ಪ್ರದರ್ಶನಕ್ಕೆ ಅನುಮತಿಕೋರಿ ಸಂಬಂಧಿಸಿದವರಿಗೆ ಒಂದು ಪತ್ರವನ್ನು ಬರೆಯಿರಿ.

೨. ನೀವು ನೋಡಿದ ಐತಿಹಾಸಿಕ ಸ್ಥಳದ ಕುರಿತು ನಿಮ್ಮ ಗೆಳೆಯ/ ಗೆಳೆಯತಿಗೆ ಒಂದು ಪತ್ರವನ್ನು ಬರೆಯಿರಿ.

**III.** ಪ್ಯಾಸೇಜ್ 10

ಅಂದು ಮಹಾರಾಜ ಕಾಲೇಜು ಸಂಸ್ಕೃತಿ ಮತ್ತು ಜ್ಞಾನದ ದೇಗುಲದಂತಿತ್ತು. ಇಂದಿನಂತೆ ವಿದ್ಯಾರ್ಥಿ ಮತ್ತು ಉಪಾಧ್ಯಾಯರ ಚಳುವಳಿಯಿರಲಿಲ್ಲ, ಕಾಲೇಜಿನ ಶಿಕ್ಷಕ ವರ್ಗದವರು ಅಲ್ಪ ಸಂಬಳ ಬರುತ್ತಿದ್ದರೂ ತಮ್ಮ ವೃತ್ತಿ ಪವಿತ್ರವಾದುದೆಂದುತೃಪ್ತಿಯಿಂದ ಕಾರ್ಯ ನಿರ್ವಹಿಸುತ್ತಿದ್ದರು.ಅವರಲ್ಲಿ ಜ್ಞಾನ ಸಂಪತ್ತಿನ ಜೊತೆಗೆ ನೈತಿಕ ಸಂಪತ್ತುಇತ್ತು. ಮಹಾರಾಜ ಕಾಲೇಜಿನಲ್ಲಿಯೂ ನನಗೆ ವಿದ್ಯಾರ್ಥಿವೇತನ ಲಭ್ಯವಾಗಿತ್ತು.

ವಿದ್ಯಾರ್ಥಿವೇತನದ ಮೊತ್ತ ತಿಂಗಳಿಗೆ ಹದಿನೆಂಟು ರೂಪಾಯಿ. ವಿದ್ಯಾರ್ಥಿವೇತನ ಪಡೆಯುತ್ತಿದ್ದವರಿಗೆ ಕಾಲೇಜಿನಲ್ಲಿ ಶುಲ್ಕವಿರಲಿಲ್ಲ. ಬೆಂಗಳೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಹಣಕ್ಕಾಗಿ ನಮ್ಮ ಚಿಕ್ಕಪ್ಪನನ್ನು ಆಶ್ರಯಿಸುತ್ತಿರಲಿಲ್ಲ. ಅವರಿಗೆ ನನ್ನಿಂದ ತೊಂದರೆಯಾಗಬಾರದೆಂಬ ಉದ್ದೇಶದಿಂದ ವಿದ್ಯಾರ್ಥಿವೇತನದಿಂದಲೇ ನನ್ನ ಜೀವನ ನಿರ್ವಹಿಸುತ್ತಿದ್ದೆ.

ಮೈಸೂರಿನಲ್ಲಿಯೂ ವಿದ್ಯಾರ್ಥಿ ವೇತನದಿಂದಲೇ ನನ್ನ ಜೀವನ ನಿರ್ವಹಿಸುತ್ತಿದ್ದೆ. ನನ್ನ ಸಕಲ ಕರ್ಚು ವೆಚ್ಚಗಳನ್ನು ಸರಿದೂಗಿಸುತ್ತಿತ್ತು. ವಿದ್ಯಾರ್ಥಿನಿಲಯದಲ್ಲಿ ಎರಡು ಹೊತ್ತು ಪುಷ್ಠಿಕರ ಆಹಾರ ದೊರೆಯುತ್ತಿತ್ತು. ಉಪಹಾರದ ವ್ಯವಸ್ಥೆ ಇರಲಿಲ್ಲ.

ಕಾಲೇಜಿನಲ್ಲಿ ಬಿಡುವಿದ್ದಾಗ ವಾಚನಾಲಯದಲ್ಲಿ ಇದ್ದ ದಿನ ಪತ್ರಿಕೆಗಳನ್ನು ತಪ್ಪದೆ ಓದುತ್ತಿದ್ದೆ.ಮಹಾತ್ಮಗಾಂಧಿಯಂತಹ ರಾಷ್ಟ್ರಭಕ್ತರ ಭಾಷಣಗಳೂ,ಲೇಖನಗಳೂ ನನ್ನ ಮನಸಿನ ಮೇಲೆ ಬಹಳ ಪರಿಣಾಮವನ್ನುಂಟುಮಾಡಿದವು.

ದಿನಪತ್ರಿಕೆಗಳಲ್ಲೂ ವಿಚಾರ ಸಂಕೀರ್ಣಗಳಲ್ಲೂ, ರಾಜಕಾರಣ ಮತ್ತು ಅರ್ಥಶಾಸ್ತ್ರಕ್ಕೆ ಸಂಬಂಧಪಟ್ಟ ಲೇಖನಗಳನ್ನು ಓದುತ್ತಿದ್ದುದರಿಂದ ಪರೀಕ್ಷಾ ವಿಷಯಗಳಾಗಿದ್ದ ರಾಜಕೀಯ ಶಾಸ್ತ್ರ ಮತ್ತು ಅರ್ಥಶಾಸ್ತ್ರಗಳಿಗೆ ಸಂಬಂಧಪಟ್ಟ ವಿಚಾರಗಳು ತಿಳಿಯುತ್ತಿದ್ದವು.

ಹೇಗಲ್ , ಕ್ಯಾಂಟ್ , ವಾಲ್ಟೇರ್ , ರೂಸ್ಸೋ ಮುಂತಾದ ದಾರ್ಶನಿಕರ ಕೃತಿಗಳನ್ನೂ ಗ್ರೀಕ್ ಮಹಾಕವಿ ಹೋಮರನ ಇಲಿಯಡ್ ಮತ್ತು ಒಡಿಸ್ಸಿ ಮಹಾಕಾವ್ಯಗಳನ್ನು ಗಿಬ್ಬನ್ ಅವರ ಉನ್ನತಿ ಮತ್ತು ಅವನತಿ ಗ್ರಂಥವನ್ನೂ, ರವೀಂದ್ರನಾಥ್ ಠಾಗೂರ್ , ಬರ್ನಾಡ್ ಷಾ, ಟಾಲ್ ಸ್ಟಾಯ್ ಮುಂತಾದವರ ಕೃತಿಗಳನ್ನೂ ಓದಿರುವುದರಿಂದ ನನ್ನ ಮನಸ್ಸು ಬಹಳ ವಿಕಾಸಗೊಂಡಿತ್ತು.

ಅಂದು ಜ್ಞಾನ ಸಂಪಾದನೆ ವಿದ್ಯಾರ್ಥಿಗಳ ಮುಖ್ಯ ಗುರಿಯಾಗಿದ್ದರೆ; ಇಂದು ಪರೀಕ್ಷೆಯಲ್ಲಿ ಹೇಗಾದರೂ ಮಾಡಿ ಉತ್ತೀರ್ಣರಾಗುವುದೇ ಗುರಿಯಾಗಿದೆ.

ಪ್ರಶ್ನೆಗಳು

೧.ಅಂದು ಮಹಾರಾಜ ಕಾಲೇಜು ಹೇಗಿತ್ತು ? ಹಾಗೂ ಶಿಕ್ಷಕ ವರ್ಗದವರು ಹೇಗಿದ್ದರು ?
೨. ಲೇಖಕರ ಓದಿಗೆ ಹೇಗೆ ಹಣದ ವ್ಯವಸ್ಥೆಯಾಗಿತ್ತು ?
೩. ಬಿಡುವಿನ ಅವಧಿಯಲ್ಲಿ ಲೇಖಕರು ಏನು ಮಾಡುತ್ತಿದ್ದರು ?
೪. ಲೇಖಕರ ಓದಿದ ಕೃತಿಗಳು ಮತ್ತು ಅದರ ರಚನಾಕಾರರು ಯಾರು ?
೫. ಇಂದಿನ ವಿದ್ಯಾರ್ಥಿಗಳಿಗೂ, ಹಿಂದಿನ ವಿದ್ಯಾರ್ಥಿಗಳಿಗೂ ಇದ್ದ ವ್ಯತ್ಯಾಸವೇನು ?

## IV. ವ್ಯಾಕರಣ 8

೧. ಸಂತಸ , ನೂತನ (ಸಮನಾರ್ಥಕ ಪದ ಬರೆಯಿರಿ)
೨. ಏಳು , ನೈತಿಕ (ವಿರುದ್ಧ ಪದ ಬರೆಯಿರಿ)
೩. ನೇಮಕಮಾಡು , ಪೋಷಿಸು ( ಸ್ವಂತ ವಾಕ್ಯದಲ್ಲಿ ಬರೆಯಿರಿ)
೪. ಇಂದಿನ ಸೋಲು ______ ( ಗಾದೆ ಮಾತನ್ನು ಪೂರ್ತಿಗೊಳಿಸಿರಿ)
೫. ನಾನು ನಾಳೆ ನಮ್ಮ ತಾಯಿಯ ಜೊತೆಯಲ್ಲಿ ಮಾರುಕಟ್ಟೆಗೆ ಹೊಗುತ್ತಿದ್ದೇನೆ.
( ಗೆರೆ ಎಳೆದ ಪದವನ್ನು ಬಹುವಚನಕ್ಕೆ ಬದಲಾಯಿಸಿರಿ)
೬. ವಾಹನಗಳು ಮಾರ್ಗದಲ್ಲಿ ವೇಗವಾಗಿ ಚಲಿಸಿದವು.
(ವರ್ತಮಾನ ಕಾಲಕ್ಕೆ ಬದಲಾಯಿಸಿರಿ)
೭. ಅವಳು ವಯಸ್ಸಾದ ಕಾರಣದಿಂದ ಕೋಲು ಹಿಡಿದು ನಡೆಯುತ್ತಾಳೆ.
(ಲಿಂಗ ಬದಲಾಯಿಸಿರಿ)
೮. ಶಾಲೆ__ ಸಮಯ__ ಸರಿಯಾಗಿ ಹೋಗಬೇಕು.
(ವಿಭಕ್ತಿ ಪ್ರತ್ಯಯ ಪೂರ್ತಿಗೊಳಿಸಿರಿ)

## ವಿಭಾಗ - ಬಿ ( 40ಅಂಕಗಳು )

ಸಾಹಿತ್ಯ ಸಂಗಮ

**V.** ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. (ಶಿವಭೂತಿಯ ಕಥೆ) 10

೧. ಬಾವಿಯಲ್ಲಿ ಬಿದ್ದವರು ಯಾರು ಯಾರು ? ಅವರು ಹೇಗೆ ಬಾವಿಯಲ್ಲಿ ಬಿದ್ದರು ?

೨. ಈ ಪಾಠದಿಂದ ತಿಳಿಯುವ ನೀತಿಯೇನು ?

೩. ಹುಲಿಯು ಶಿವಭೂತಿಗೆ ಏನೆಂದು ಹೇಳಿತು ?

೪. ಕಂಬಳಕನ ಊರು ಯಾವುದು ? ಅವನು ಶಿವಭೂತಿಗೆ ಮಾಡಿದ ದ್ರೋಹವೇನು ?

**VI.** ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.(ದೀಪಾವಳಿಯ ಮಹಿಮೆ)10

೧. ಚಿನ್ನಾರಿ ದೇಶದ ರಾಜ ಯಾರು ? ಅವನ ಬಗ್ಗೆ ಪ್ರಜೆಗಳಿಗೆ ಏಕೆ ಚಿಂತೆಯಾಯಿತು ?

೨. ಲಕ್ಷ್ಮೀದೇವಿಗೆ ಅವಮಾನವಾಗಲು ಕಾರಣವೇನು ?

೩. ಲಕ್ಷ್ಮೀದೇವಿಯು ಪ್ರತಾಪನ ಅಹಂಕಾರವನ್ನು ಹೇಗೆ ಮುರಿದಳು ?

೪. ಪ್ರತಾಪನು ತನ್ನ ರಾಜ್ಯವನ್ನು ಮತ್ತೆ ಹೇಗೆ ಪಡೆದನು ?

**VII.** ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. (ತಾಳ್ಮೆಗೆ ಒಲಿದ ಅದೃಷ್ಟ) 10

೧. ಪಾರಿವಾಳಗಳು ಹೇಗಿದ್ದವು ?

೨. ಪಾರಿವಾಳಗಳಿಗೆ ಆಶ್ಚರ್ಯದ ಜೊತೆಗೆ ಸಂತೋಷವು ಉಂಟಾಗಲು ಕಾರಣವೇನು ?

೩. ಈ ಕಥೆಯಿಂದ ನಾವು ತಿಳಿಯುವ ಸಂದೇಶವೇನು ? ವಿವರಿಸಿ.

೪. ಬೇಡನು ಬಾಣ ಬಿಟ್ಟಾಗ ನಡೆದ ಘಟನೆ ಏನು ?

**VIII.** ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. (ತುಚೀಪ್, ತುದಾಂಡ್, ತುಬದ್– ರೆಡೀ) 10

೧. ಚದುರಂಗರವರ ಜೀವನ ಹಾಗೂ ಸಾಧನೆಯ ಕುರಿತು ಬರೆಯಿರಿ.

೨. ಕರೀಮನು ವೇಗವಾಗಿ ಎಲ್ಲಿಗೆ ಹೋಗುತ್ತಿದ್ದನು ? ಅವನಿಗೆ ನಗು ಬರಲು ಕಾರಣವೇನು ?

೩. ಕಾರ್ಮಿಕರು ಬೀಡಿ ಕಾರ್ಖಾನೆಯಲ್ಲಿ ಹೇಗೆ ದುಡಿಯಬೇಕಿತ್ತು ? ಅಲ್ಲಿ ಕರೀಮನ ಕೆಲಸವೇನಾಗಿತ್ತು ?

೪. ತಿಮ್ಮಾರೆಡ್ಡಿಗೆ ಅವಮಾನವಾಗಿ ಕೋಪ ಉಂಟಾಗಲು ಕಾರಣವೇನು ?

********************